ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರ ಕಛೇರಿ,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.
(ಕಛೇರಿ:08262-234904 ಫ್ಯಾಕ್ಸ್:08262-230032 ಇ-ಮೇಲ್:dcfbhadra@yahoo.com)

ಸಂಖ್ಯೆ:ಎ5/ಭೂಮಿ/ಸಿಆರ್-9/2008-09 1219 ದಿನಾಂಕ:14-11-2019.

**ಇವರಿಗೆ,**

ಕುಲಸಚಿವರು,
ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ-577451,
ಶಿವಮೊಗ್ಗ ಜಿಲ್ಲೆ. → By RLAD

**ವಿಷಯ:** ಕುವೆಂಪು ವಿಶ್ವವಿದ್ಯಾನಿಲಯಕ್ಕೆ ನೀಡಿರುವ 230 ಎಕರೆ ಜಮೀನಿನ ಗುತ್ತಿಗೆ ನವೀಕರಣದ ಬಗ್ಗೆ.

**ಉಲ್ಲೇಖ:**
1. ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರ ಕಛೇರಿ ಆದೇಶ ಸಂಖ್ಯೆ:ಎಂ4/ ಎಲ್ಎನ್‌ಡಿ/ ಸಿಆರ್-195/2007-08, ದಿನಾಂಕ:26-05-2009.
2. ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರ ಕಛೇರಿ ಆದೇಶ ಸಂಖ್ಯೆ:ಎಂ4/ ಎಲ್ಎನ್‌ಡಿ/ ಸಿಆರ್-195/2007-08, ದಿನಾಂಕ:29-03-2019.
3. ವಲಯ ಅರಣ್ಯಾಧಿಕಾರಿ, ಭದ್ರಾ ವನ್ಯಜೀವಿ ವಲಯ, ತಣಿಗೆಬೈಲು ಇವರ ಪತ್ರ ಸಂಖ್ಯೆ:284/2019-20, ದಿನಾಂಕ:02-08-2019.
4. ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು ರವರ ಪತ್ರ ಸಂಖ್ಯೆ:ಬಿ4/ಲ್ಯಾಂಡ್/ಜಿಎಲ್-159/2014-15,ದಿ:19-08-2019
5. ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ ರವರ ಪತ್ರ ಸಂಖ್ಯೆ:ಬಿ2/ಭೂಮಿ/ಜಿಎಲ್-4357/2019-20, ದಿನಾಂಕ:23-08-2019.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕುವೆಂಪು ವಿಶ್ವವಿದ್ಯಾನಿಲಯಕ್ಕೆ 230 ಎಕರೆ ಅರಣ್ಯ ಪ್ರದೇಶವನ್ನು ಗುತ್ತಿಗೆ ನೀಡಿದ್ದು, ಗುತ್ತಿಗೆ ಅವಧಿಯು ದಿನಾಂಕ:20-02-1999 ಕ್ಕೆ ಮುಕ್ತಾಯಗೊಂಡಿರುತ್ತದೆ. ಗುತ್ತಿಗೆ ಅವಧಿಯನ್ನು ನವೀಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕುವೆಂಪು ವಿಶ್ವವಿದ್ಯಾನಿಲಯಕ್ಕೆ ನೀಡಿದ 230 ಎಕರೆ ಅರಣ್ಯ ಪ್ರದೇಶದ ಬದಲಿಗೆ ಕೆಳಕಂಡ ಜಮೀನನ್ನು ಅರಣ್ಯೀಕರಣಕ್ಕಾಗಿ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರು ಬಿಡುಗಡೆ ಮಾಡಿರುತ್ತಾರೆ.

**ಆದೇಶ ಸಂಖ್ಯೆ:ಎಂ4/ಎಲ್ಎನ್‌ಡಿ/ಸಿಆರ್-195/2007-08, ದಿನಾಂಕ:26-05-2009.**

| ಕ್ರ.ಸಂ. | ತಾಲ್ಲೂಕು | ಗ್ರಾಮ | ಸರ್ವೆ ನಂ | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|---|
| 1 | ಚಿಕ್ಕಮಗಳೂರು | ಕೆಸವಿನಮನೆ | 40 | 80.35 |
| 2 | ಚಿಕ್ಕಮಗಳೂರು | ಕೆಸವಿನಮನೆ | 46 | 80.00 |
| 3 | ಚಿಕ್ಕಮಗಳೂರು | ಕೆಸವಿನಮನೆ | 49 | 70.00 |
| 4 | ತರೀಕೆರೆ | ತಿಗಡ | 13 | 70.32 |
| | | | ಒಟ್ಟು | **301.27** |

-2,,

**ಆದೇಶ ಸಂಖ್ಯೆ:ಎಂ4/ಎಲ್ಎನ್ಡಿ/ಸಿಆರ್-195/2007-08, ದಿನಾಂಕ:29-03-2019**

| ಕ್ರ.ಸಂ. | ತಾಲ್ಲೂಕು | ಗ್ರಾಮ | ಸರ್ವೆ ನಂ | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|---|
| 1 | ಚಿಕ್ಕಮಗಳೂರು | ಕೆಸವಿನಮನೆ | 38 | 200.00 |
| 2 | ಚಿಕ್ಕಮಗಳೂರು | ಕೆಸವಿನಮನೆ | 39 | 320.30 |
| 3 | ಚಿಕ್ಕಮಗಳೂರು | ಕೆಸವಿನಮನೆ | 40 | 5.00 |
| 4 | ಚಿಕ್ಕಮಗಳೂರು | ಕೆಸವಿನಮನೆ | 45 | 57.33 |
| 5 | ಚಿಕ್ಕಮಗಳೂರು | ಕೆಸವಿನಮನೆ | 46 | 43.14 |
| 6 | ಚಿಕ್ಕಮಗಳೂರು | ಕೆಸವಿನಮನೆ | 49 | 22.01 |
| | | | ಒಟ್ಟು | **648.38** |

ಮೇಲಿನಂತೆ ಬಿಡುಗಡೆ ಮಾಡಿರುವ ಪ್ರದೇಶದ ಪ್ರಸ್ತುತ ವಾಸ್ತು ಸ್ಥಿತಿಯನ್ನು ಉಲ್ಲೇಖಿತ (3), (4) ಮತ್ತು (5) ರ ಪತ್ರಗಳ ವರದಿಯನ್ನು ಪರಿಶೀಲಿಸಲಾಗಿ ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ. | ತಾಲ್ಲೂಕು | ಗ್ರಾಮ | ಸರ್ವೆ ನಂ | ಪಹಣಿ ಪ್ರಕಾರ ವಿಸ್ತೀರ್ಣ (ಎಕರೆಗಳಲ್ಲಿ) | ಬಿಡುಗಡೆ ಮಾಡಿರುವ ವಿಸ್ತೀರ್ಣ (ಎಕರೆಗಳಲ್ಲಿ) | ಡೀಮ್ಡ್ ಫಾರೆಸ್ಟ್ (ಎಕರೆಗಳಲ್ಲಿ) | ಒತ್ತುವರಿ (ಎಕರೆಗಳಲ್ಲಿ) |
|---|---|---|---|---|---|---|---|
| 1 | ಚಿಕ್ಕಮಗಳೂರು | ಕೆಸವಿನಮನೆ | 38 | 280.39 | 200.00 | 486.99 | 105.02 |
| 2 | ಚಿಕ್ಕಮಗಳೂರು | ಕೆಸವಿನಮನೆ | 39 | 320.30 | 320.30 | 706.99 | 1.28 |
| 3 | ಚಿಕ್ಕಮಗಳೂರು | ಕೆಸವಿನಮನೆ | 40 | 194.02 | 85.35 | 96.42 | 0 |
| 4 | ಚಿಕ್ಕಮಗಳೂರು | ಕೆಸವಿನಮನೆ | 45 | 58.02 | 57.33 | 143.37 | 0 |
| 5 | ಚಿಕ್ಕಮಗಳೂರು | ಕೆಸವಿನಮನೆ | 46 | 128.28 | 123.14 | 215.64 | 12.12 |
| 6 | ಚಿಕ್ಕಮಗಳೂರು | ಕೆಸವಿನಮನೆ | 49 | 92.01 | 92.01 | 185.77 | 22.20 |
| 7 | ತರೀಕೆರೆ | ತಿಗಡ | 13 | 72.02 | 70.32 | 0 | 0 |
| | | | **ಒಟ್ಟು** | **1145.04** | **949.05** | **1835.18** | **140.62** |

ಮೇಲಿನ ತಃಖ್ತೆಯನ್ನು ಪರಿಶೀಲಿಸಿದಾಗ ಗುತ್ತಿಗೆ ನೀಡಿರುವ 230 ಎಕರೆ ಬದಲಿಗೆ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಯಾವುದೇ ಜಮೀನು ನೀಡಿದಂತೆ ಆಗುವುದಿಲ್ಲ ಆದ್ದರಿಂದ, ನೀವು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚಿಸಿ ಮೇಲ್ಕಂಡ ಪ್ರದೇಶಗಳಲ್ಲಿ ಅರಣ್ಯ ಇಲಾಖೆಗೆ ನೀಡಿರುವ ಜಾಗವನ್ನು ನಕಾಶೆಯಲ್ಲಿ ಗುರುತಿಸಿ ಸದರಿ ಪ್ರದೇಶವನ್ನು ಅರಣ್ಯವೆಂದು ಇಂಡೀಕರಣಗೊಳಿಸಿದಲ್ಲಿ ಮಾತ್ರ 230 ಎಕರೆ ಗುತ್ತಿಗೆ ಪ್ರದೇಶವನ್ನು ನವೀಕರಣಗೊಳಿಸಲು ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗುವುದು. ತಪ್ಪಿದಲ್ಲಿ ಗುತ್ತಿಗೆ ಅವಧಿಯನ್ನು ನವೀಕರಿಸಲು ಬರುವುದಿಲ್ಲ ತಿಳಿಯಿರಿ.

-3,,

ಗುತ್ತಿಗೆ ಅವಧಿ ನವೀಕರಣ ಆಗುವವರೆಗೆ ಯಾವುದೇ ಅರಣ್ಯೇತರ ಚಟುವಟಿಕೆಗಳನ್ನು ನಡೆಸಬಾರದೆಂದು ನಿಮಗೆ ಅನೇಕ ಬಾರಿ ತಿಳಿಸಿದ್ದರೂ ಸಹ ಅರಣ್ಯೇತರ ಚಟುವಟಿಕೆಗಳನ್ನು ನಡೆಸುತ್ತಿರುವ ಬಗ್ಗೆ ಈಗಾಗಲೇ ಅನೇಕ ದೂರುಗಳು ಬಂದಿರುತ್ತವೆ. ಗುತ್ತಿಗೆ ಅವಧಿ ನವೀಕರಣ ಆಗುವವರೆಗೆ ಯಾವುದೇ ಅರಣ್ಯೇತರ ಚಟುವಟಿಕೆಗಳನ್ನು ನಡೆಸಬಾರದೆಂದು ಮತ್ತೊಮ್ಮೆ ತಿಳಿಸಿದೆ. ತಪ್ಪಿದಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ರನ್ವಯ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು ತಿಳಿಯಿರಿ.

ನಿಮ್ಮ ವಿಶ್ವಾಸಿ,
ಸಹಿ/-
ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.

ಪ್ರತಿಯನ್ನು:-

1) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಹುಲಿಯೋಜನೆ), ಮೈಸೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6) ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7) ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
8) ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾ ವನ್ಯಜೀವಿ ಉಪವಿಭಾಗ, ಲಕ್ಕವಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
10) ವಲಯ ಅರಣ್ಯಾಧಿಕಾರಿ, ಭದ್ರಾ ವನ್ಯಜೀವಿ ವಲಯ, ಲಕ್ಕವಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11) ವಲಯ ಅರಣ್ಯಾಧಿಕಾರಿ, ಭದ್ರಾ ವನ್ಯಜೀವಿ ವಲಯ, ತಣಿಗೆಬೈಲು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.

ರವಾನಿಸಲಾಗಿದೆ
ದಿನಾಂಕ......14/11/19......

ಕ್ಷೇ.ಪ್ರ.

A5/2019-20/Kuvempu University letr